# ಧರ್ಮಾಚರಣೆಯ ರಹಸ್ಯ

## ಪ್ರಾತಃ ಸ್ಮರಣೀಯ
## ಶ್ರೀ ವಿದ್ಯಾಮಾನ್ಯ ತೀರ್ಥರು

## ಕರದರ್ಶನ ಮತ್ತು ಭೂವಂದನೆ

ಆದ್ದರಿಂದ ನಾವು ಪ್ರತಿನಿತ್ಯವೂ ಬೆಳಗ್ಗೆ ಬ್ರಾಹ್ಮಮುಹೂರ್ತದಲ್ಲಿ ಏಳುವ ನಿಯಮವನ್ನು ಇಟ್ಟುಕೊಳ್ಳಬೇಕು.ಎದ್ದ ಕೂಡಲೇ ಜಗತ್ಕರ್ತ ನಮಗೆ ದುರ್ಲಭವಾದ ಶ್ರೇಷ್ಠವಾದ ಮನುಷ್ಯ ದೇಹವನ್ನು ಕೊಟ್ಟ ತಂದೆಯಾದ,ನಮ್ಮ ಉದ್ಧಾರ ಮಾಡತಕ್ಕ ಪರಮಾತ್ಮನಿಗೆ ನಮಸ್ಕಾರ ಮಾಡಿ ಅವನ ಸ್ತೋತ್ರ ಮಾಡಬೇಕು.ಅವನ ಧ್ಯಾನ ಮಾಡಬೇಕು.ಭಗವದ್ಭಕ್ತರುಗಳ ಸ್ತೋತ್ರ ಮಾಡಿ ಅವರಿಗೆಲ್ಲ ನಮಸ್ಕಾರ ಮಾಡಬೇಕು.ಗೋವಿಗೆ ಗ್ರಾಸವನ್ನು ಕೊಡಬೇಕು.ಅನೇಕ ಪುಣ್ಯಶ್ಲೋಕರಾದ ನಳ,ಯುಧಿಷ್ಠಿರ, ಮಾಂಧಾತ, ನಹುಷ,ಅಂಬರೀಷ ಮುಂತಾದ ರಾಜರುಗಳನ್ನು ಸ್ಮರಿಸಬೇಕು.ನಮಗೆ ಆಧಾರಭೂತಳಾದ ಪೃಥಿವಿಗೆ ನಮಸ್ಕಾರ ಮಾಡಬೇಕು.ಹಸ್ತದ ಅಗ್ರಭಾಗ,ಮಧ್ಯಭಾಗ,ಮೂಲ ಭಾಗಗಳಲ್ಲಿ ಲಕ್ಷ್ಮೀ,ಸರಸ್ವತಿ, ಗೋವಿಂದ ಇವರುಗಳ ಸನ್ನಿಧಾನ ಇದೆ ಎಂದು ಧ್ಯಾನಿಸಿ ಕರದರ್ಶನ ಮಾಡಬೇಕು.ದ್ರೌಪದ್ಯಾದಿ ಪಂಚ ಪತಿವ್ರತೆಯರನ್ನು ಸ್ಮರಿಸಬೇಕು.ಈ ರೀತಿ ನಿತ್ಯ ಬ್ರಾಹ್ಮ ಮುಹೂರ್ತದಲ್ಲಿ ಎದ್ದು ಮಾಡುತ್ತಾ ಬಂದರೆ ಆ ದಿನಗಳೆಲ್ಲ ಮಂಗಳಮಯಗಳು ಆಗುತ್ತವೆ.ಇಡೀ ದಿನ ಮಾಡತಕ್ಕ ಕಾರ್ಯಗಳಿಗೆ ಅವಸ್ಯ ಬೇಕಾದ ಸ್ಫೂರ್ತಿಯು ಬರುತ್ತದೆ.ದೇಶ ಸಮಾಜಗಳನ್ನು ಉದ್ಧಾರ ಮಾಡಿದ ಹಿಂದಿನ ಮಹಾಪುರುಷರನ್ನು ಬೆಳಗ್ಗೆ ಎದ್ದು ಸ್ಮರಿಸಿದರೆ ನಾವು ಅವರಂತೆ ಇಡೀ ದಿನ ದೇಶೋದ್ಧಾರ ,ಆತ್ಮೋದ್ಧಾರದ ಬಗ್ಗೆ ದುಡಿಯಬೇಕು ಎಂದು ಸ್ಫೂರ್ತಿ ಬರುತ್ತದೆ.ಬೆಳಗ್ಗೆ ಎದ್ದು

ಕರಾಗ್ರೇ ವಸತೇ ಲಕ್ಷ್ಮೀಃ ಕರಮಧ್ಯೇ ಸರಸ್ವತೀ।
ಕರಮೂಲೇ ತು ಗೋವಿಂದಃ ಪ್ರಭಾತೇ ಕರದರ್ಶನಮ್॥

ಈ ರೀತಿ ಧ್ಯಾನ ಮಾಡಿದರೆ ಮನುಷ್ಯನು ಇಡೀ ದಿನದಲ್ಲಿ ಏನು ಮಾಡಬೇಕು ಎಂಬುದು ಗೊತ್ತಾಗುತ್ತದೆ.ಮನುಷ್ಯನು ಸಂಪತ್ತನ್ನು,ವಿದ್ಯೆಯನ್ನು ಸಂಪಾದಿಸಿ ಅದರಿಂದ ಗೋವಿಂದನ ಅನುಗ್ರಹ ಪಡೆದು ಪರಮಪುರುಷಾರ್ಥವಾದ ಮೋಕ್ಷವನ್ನು ಪಡೆಯತಕ್ಕದ್ದು ಕರ್ತವ್ಯ.ಆದರೆ ಅದಕ್ಕಾಗಿ ಇನ್ನೊಬ್ಬರನ್ನು ಆಶ್ರಯಿಸದೆ ತಾನೇ ಪ್ರಯತ್ನ ಮಾಡಿ ಸಂಪಾದಿಸಬೇಕು.ತನ್ನ ಕೈಯ ತುದಿಯಲ್ಲಿಯೇ ಲಕ್ಷ್ಮಿದೇವಿಯು ಇದ್ದಾಳೆ.ಕೈಯಿಂದ ಕರ್ಮ ಮಾಡಿದರೆ ನಮಗೆ ಸಂಪತ್ತು ಬರುತ್ತದೆ.ನಾವು ಸರಿಯಾಗಿ ಓದಿದರೆ ನಮಗೆ ಸರಸ್ವತಿಯು ಒಲಿಯುತ್ತಾಳೆ.ನಾವು ಸ್ವತಃ ಸಾಧನ ಮಾಡಿದರೆ ಆ ಗೋವಿಂದನು ನಮ್ಮ ಭಕ್ತಿಗೆ ವಶನಾಗುತ್ತಾನೆ.ಆದ್ದರಿಂದ ಇನ್ನೊಬ್ಬರನ್ನು ನಂಬಿ ಮೋಸಹೋಗಬಾರದು.ನಾವೇ ದುಡಿಯಬೇಕು ಎಂಬ ಸ್ಫೂರ್ತಿಯು, ಈ ಪ್ರಾರ್ಥನೆಯನ್ನು ನಿತ್ಯ ಬೆಳಗ್ಗೆ ಮಾಡತಕ್ಕವರಿಗೆ ಬರುತ್ತದೆ.ಹಾಗೆ ನಿತ್ಯ

ಸಮುದ್ರವಸನೇ ದೇವಿ ಪರ್ವತಸ್ತನಮಂಡಿತೆ।
ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೇ॥

ನಾಲ್ಕು ಸಮುದ್ರಗಳೇ ವಸ್ತ್ರವಾಗಿ ಉಳ್ಳ ಪರ್ವತಗಳೆಂಬ ಸ್ತನಗಳಿಂದ ಶೋಭಾಯಮಾನಳಾದ ವಿಷ್ಣುಪತ್ನಿಯಾದ ಪೃಥಿವಿಯೇ ನಾವು ನಿನಗೆ ಪಾದ ಸ್ಪರ್ಶರೂಪ ಅಪರಾಧ ಮಾಡಿದ್ದನ್ನು ಕ್ಷಮಿಸು –ಎಂಬ ಪ್ರಾರ್ಥನೆಯು ಬಹಳ ಅರ್ಥವನ್ನು ತಿಳಿಸುತ್ತದೆ.ಈಗಿನ ಕಾಲದಲ್ಲಿ ಚೀನಾದೇಶದವರು ಹಿಮಾಲಯದಲ್ಲಿ ಆಕ್ರಮಣವನ್ನು ಮಾಡುವುದೆಂದರೆ ನಮ್ಮ ತಾಯಿಯ ಸ್ತನವನ್ನು ದುಷ್ಟಪುರುಷರು ಹಿಡಿದಂತೆ ಎಂಬ ಭಾವೋದ್ರೇಕವಾಗಿ ದೇಶ ರಕ್ಷಣೆಗಾಗಿ ದುಡಿಯಬೇಕೆಂಬ ಬುದ್ಧಿಯು ಉತ್ಪನ್ನವಾಗುತ್ತದೆ.

ಈ ಪೃಥಿವಿಯು ವಿಷ್ಣು ಪತ್ನಿಯು ಎಂದು ಪ್ರಾರ್ಥಿಸಿದಾಗ ನಮಗೆ ಈ ಭೂಮಿಯು ಮಾತೃಭೂಮಿಯಾದ ಮೇಲೆ ಅವಳಿಗೆ ಪತಿಯಾದ ವಿಷ್ಣುವಿನಲ್ಲಿ ತಂದೆಯೆಂಬ ಭಾವನೆ ಬಂದು ಮಾತೃಭೂಮಿಯಲ್ಲಿ ಎಷ್ಟು ವಿಶ್ವಾಸಮಾಡುತ್ತೇವೋ ಹಾಗೆ ತಂದೆಯಾದ ವಿಷ್ಣುವಿನಲ್ಲಿಯೂ ಭಕ್ತಿಮಾಡಬೇಕೆಂಬ ಬುದ್ಧಿಯು ಉತ್ಪನ್ನವಾಗುತ್ತದೆ.ಈಗಿನ ಕಾಲದಲ್ಲಿ ಬಹಳ ಜನರು 'ವಂದೇ ಮಾತರಂ ಸುಜಲಾಂ ಸುಫಲಾಂ ಸಸ್ಯಶಾಮಲಾಂ' ಎಂದು ಮಾತೃಭೂಮಿಗೆ ನಮಸ್ಕಾರ ಮಾಡುತ್ತಾರೆ.ಆದರೆಇದರಲ್ಲಿ ಈ ಮಾತೃಭೂಮಿಗೆ ಪತಿ ಯಾರು,ನಮಗೆ ತಂದೆ ಯಾರು? ಎಂಬುದು ತಿಳಿಯುವುದಿಲ್ಲ. ಕೇವಲ ತಾಯಿಯ ಗುರುತು ಮಾತ್ರವಾಗುತ್ತದೆ. ತಂದೆಯ ಗುರುತು ಇಲ್ಲದೆ ತಾಯಿಯ ಗುರುತು ಮಾತ್ರ ಇರುವುದು ಬಹಳ ನಿಂದ್ಯವಾಗಿದೆ.ಪಶುಗಳಿಗೆ, ನಾಯಿ ,ಹಂದಿ ಮುಂತಾದವುಗಳಿಗೂ ತಾಯಿಯ ಗುರುತಿದ್ದು ತಾಯಿಯ ಸ್ತನ್ಯಪಾನ ಮಾಡುತ್ತವೆ.ಅವುಗಳಿಗೆ ತಂದೆಯ ಗುರುತೇ

©Poorna Prajna Vidyapeetha, Bangalore

ಇಲ್ಲ. ಹಾಗೆ ಮನುಷ್ಯರಲ್ಲಿಯೂ ವ್ಯಭಿಚಾರಕ್ಕೆ ಹುಟ್ಟಿದ ಮಕ್ಕಳಿಗೂ ತಂದೆಯ ಗುರುತಿರುವುದಿಲ್ಲ. ವ್ಯಭಿಚಾರಕ್ಕೆ ಹುಟ್ಟಿದ ಮಕ್ಕಳು ಶಾಲೆಗೆ ಸೇರಿದಾಗ ಶಿಕ್ಷಕರು ನಿನ್ನ ತಂದೆಯಾರು ಎಂದು ಕೇಳಿದಾಗ ಆ ಹುಡುಗನು ತಲೆ ಬಗ್ಗಿಸಬೇಕಾಗುತ್ತದೆ.ಹೀಗೆ ಈಗಿನ ಜನತೆಯ ಪರಿಸ್ಥಿತಿಯಾಗಿದೆ.ವಂದೇ ಮಾತರಂ ಎಂಬುದಾಗಿ ಮಾತೆಯನ್ನು ಸ್ತೋತ್ರ ಮಾಡುತ್ತಾರೆ. ಆ ಸ್ತೋತ್ರದಲ್ಲಿ ನಮಗೆ ತಂದೆ ಯಾರು? ಅಂತ ಉಲ್ಲೇಖ ಮಾಡಲಿಲ್ಲ. ಆದ್ದರಿಂದ ಈಗಿನ ಜನತೆ ತಂದೆಯ ಗುರುತು ಇಲ್ಲದ ಪಶುಗಳೋ? ಎಂಬ ಭಾವನೆ ಬರುತ್ತದೆ.ಆದ್ದರಿಂದ ನಮ್ಮ ಪೂರ್ವಜರು ಉಪದೇಶ ಮಾಡಿದಂತೆ ಮಾತೃಭೂಮಿಯ ಪ್ರಾರ್ಥನೆಯನ್ನು 'ಸಮುದ್ರವಸನೇ ದೇವಿ' ಇತ್ಯಾದಿ ಮಾಡಬೇಕು.